

# ಬೇಸಿಗೆ ಪ್ರವಾಸಕ್ಕೆ ಬೆಸ್ಟ್ ತಾಣ ತಲಕಾಡು

■ ಉಮೇಶಭಟ್ಟ ಪಿ.ಎಚ್.

ತಲಕಾಡು ಎಂದ ತಕ್ಷಣವೇ ನೆನಪಾಗೋದು ಪಂಚಲಿಂಗ ದೇಗುಲಗಳ ಸಂಕೀರ್ಣ, ಮರಳು ರಾಶಿ ತುಂಬಿದ ಕಾವೇರಿ ತೀರ. ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನ ತಲಕಾಡು ಬೇಸಿಗೆ ಬಂದರೆ ಹೆಚ್ಚು ಪ್ರವಾಸಿಗರಿಗೆ ನೆನಪಾಗುತ್ತದೆ. ಏಕೆಂದರೆ ಅಲ್ಲಿನ ಕಾವೇರಿ ನದಿ ಸೃಷ್ಟಿಸಿರುವ ಸುಂದರ ತೀರ, ಮರಳು ರಾಶಿಯ ವೈಭವ. ಕುಟುಂಬದವರು, ಸ್ನೇಹಿತರೊಂದಿಗೆ ಕಾವೇರಿ ತೀರದಲ್ಲಿ ಸಮಯ ಕಳೆಯುವ ಖುಷಿಯೇ ಬೇರೆ.

ತಲಕಾಡು ಗಂಗರ ಕಾಲದ ರಾಜಧಾನಿಯೂ ಹೌದು. 19ನೇ ಶತಮಾನದ ಹಿಂದೆಯೇ ಗಂಗರ ಆಳ್ವಿಕೆಯ ಪ್ರಮುಖ ಕೇಂದ್ರವಾಗಿದ್ದ ತಲಕಾಡನ್ನು ಗಜಾರಣ್ಯಕ್ಷೇತ್ರ, ಸಿದ್ಧಾರಣ್ಯಕ್ಷೇತ್ರ ಎನ್ನುವ ಹೆಸರಿನಿಂದ ಗುರುತಿಸಲಾಗುತ್ತಿತ್ತು. ತಲಕಾಡು ಆಗುವ ಮುನ್ನ ಇದಕ್ಕೆ ತಲವನಪುರ, ರಾಜಪುರ ಎನ್ನುವ ಹೆಸರಿತ್ತು. ಗಂಗರ ಕಾಲದಲ್ಲಿಯೇ ಇಲ್ಲಿ ಶಿವನ ಹಲವು ದೇಗುಲಗಳು ನಿರ್ಮಾಣಗೊಂಡಿದ್ದವು.

ಗಂಗರ ಜತೆಯಲ್ಲಿಯೇ ಹೊಯ್ಸಳರು, ಚೋಳರು, ರಾಷ್ಟ್ರಕೂಟರು, ವಿಜಯನಗರದ ಅರಸರು, ಮೈಸೂರಿನ ಒಡೆಯರ ಸಹಿತ ಪ್ರಮುಖ ರಾಜ ವಂಶಸ್ಥರಿಗೂ ತಲಕಾಡಿನೊಂದಿಗೆ ನಂಟು ಇತ್ತು.

**ಕಾವೇರಿ ನೈಸರ್ಗಿಕ ತೀರ, ಐತಿಹಾಸಿಕ ಪಂಚಲಿಂಗ ದೇಗುಲಗಳ ವಿಶೇಷ**

ಶತಮಾನಗಳ ಹಿಂದೆಯೇ ತಲಕಾಡು 30ಕ್ಕೂ ಅಧಿಕ ದೇಗುಲಗಳಿಂದ ಕೂಡಿದ ಪ್ರಮುಖ ನಗರವಾಗಿತ್ತು. ಅದರಲ್ಲೂ ಪಂಚಲಿಂಗ ದೇಗುಲಗಳು ಇಲ್ಲಿನ ವಿಶೇಷ ಆಕರ್ಷಣೆ. ವೈದ್ಯನಾಥೇಶ್ವರ, ಗೋಕರ್ಣೇಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮರುಳೇಶ್ವರ ಎನ್ನುವ ಐದು ಪಂಚಲಿಂಗಗಳಿಗೆ ಮಹತ್ವವಿದೆ. ಈಗಲೂ ಈ ದೇಗುಲಗಳಲ್ಲಿ ವಿಶೇಷ ಪೂಜೆ ಮಾತ್ರವಲ್ಲದೆ ದರ್ಶನಕ್ಕೆ ಭಕ್ತರು ಆಗಮಿಸುತ್ತಾರೆ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಪಂಚಲಿಂಗ ದರ್ಶನ ತಲಕಾಡಿನ ವಿಶೇಷ ಆಕರ್ಷಣೆಯೂ ಹೌದು. ಗೋಕರ್ಣ ತೀರ್ಥದಲ್ಲಿ ಸ್ನಾನ ಮಾಡಿ ನಂತರ ಗೋಕರ್ಣೇಶ್ವರ, ಚಂಡಿಕಾದೇವಿ ಪೂಜೆ, ವೈದ್ಯನಾಥೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಬಳಿಕ ಅರ್ಕೇಶ್ವರ, ಪಾತಾಳೇಶ್ವರ, ಮರುಳೇಶ್ವರ ದೇಗುಲ ದರ್ಶನ ಮಾಡಿ ಮಲ್ಲಿಕಾರ್ಜುನ ಸ್ವಾಮಿ, ಕೀರ್ತಿ ನಾರಾಯಣನಿಗೆ ಪೂಜೆ ಸಲ್ಲಿಸುವುದು ವಾಡಿಕೆ.

ತಲಕಾಡಿನ ಸುತ್ತ ಈಗ ಕಾಣಸಿಗುವ ಮರಳು ರಾಶಿಯ ಹಿಂದೆ ಶತಮಾನಗಳ ಹಿಂದಿನ ಶಾಪದ ಕಥೆಯೊಂದಿದೆ. ವಿಜಯನಗರದ ಪ್ರತಿನಿಧಿಯಾಗಿ ಶ್ರೀರಂಗರಾಯ ಶ್ರೀರಂಗಪಟ್ಟಣವನ್ನು ಆಳುತ್ತಿದ್ದ. ಆತನಿಗೆ ರೋಗ ಬಂದು ಮೃತಪಟ್ಟಾಗ ಮೈಸೂರು ಒಡೆಯರು ಶ್ರೀರಂಗಪಟ್ಟಣ ವಶಪಡಿಸಿಕೊಳ್ಳುತ್ತಾರೆ. ಆನಂತರ ಶ್ರೀರಂಗರಾಯನ ಪತ್ನಿ ಅಲಮೇಲಮ್ಮ ತಲಕಾಡು ಪಕ್ಕದ ಮಾಲಂಗಿಗೆ ಬಂದು ನೆಲೆಸುತ್ತಾಳೆ. ಆಗ ಆಕೆಯ ಬಳಿ ಇದ್ದ ಆಭರಣವೊಂದನ್ನು ನೀಡುವಂತೆ ಮೈಸೂರು ಮಹಾರಾಜರು ಕೇಳಿಕೊಳ್ಳುತ್ತಾರೆ. ಆಕೆ ಅದಕ್ಕೆ ಒಪ್ಪುವುದಿಲ್ಲ. ಬೇಡಿಕೆ ಹೆಚ್ಚಾದಾಗ ಆಭರಣ ಸಹಿತ ಕಾವೇರಿ ಹೊಳೆಗೆ ಹಾರುತ್ತಾಳೆ. ಆ ವೇಳೆ ಕೋಪಗೊಂಡಿದ್ದ ಅಲಮೇಲಮ್ಮ, ತಲಕಾಡು ಮರಳಾಗಿ ಮಾಲಂಗಿ ಮಡುವಾಗಿ ಮೈಸೂರು ಮಹಾರಾಜರಿಗೆ ಮಕ್ಕಳಾಗದಿರಲಿ ಎನ್ನುವ ಶಾಪವನ್ನೂ ಹಾಕುತ್ತಾಳೆ. ಇದನ್ನು ಹಲವು ಇತಿಹಾಸತಜ್ಞರು ದಾಖಲಿಸಿದ್ದಾರೆ.

ಇಂತಹ ಇತಿಹಾಸ ಹಾಗೂ ಪಾರಂಪರಿಕ ಮಹತ್ವ ಇರುವ ತಲಕಾಡು ಪ್ರವಾಸಿ ಮಹತ್ವವನ್ನು ಪಡೆದುಕೊಂಡಿರುವುದು ಕಾವೇರಿ ನದಿ ಸೃಷ್ಟಿಸಿರುವ